

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 12-04-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸಲಿರುವ ಬದರಿ ಸಹಾಬರಲ್ಲಿ ಮೊದಲನೆಯವರ ಹೆಸರು ಹಝ್ರತ್ ಹುಸೈನ್ ಬಿನ್ ಹಾರಿಸ್(ರ). ಅವರು ಬನೂ ಮತ್‌ಲಬ್ ಬಿನ್ ಅಬ್ದು ಮುನಾಫ್ ಗೋತ್ರದವರಾಗಿದ್ದರು. ಅವರು ತನ್ನ ಇಬ್ಬರು ಸಹೋದರರಾದ ಹಝ್ರತ್ ತುಫೈಲ್ ಮತ್ತು ಹಝ್ರತ್ ಉಬೈದ ಜೊತೆಗೆ ಮದೀನಕ್ಕೆ ಹಿಜ್‌ರತ್ ಮಾಡಿದ್ದರು. ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಹುಸೈನ್ ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್ ಜೊತೆಗೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಹಝ್ರತ್ ಹುಸೈನ್ ಬದರ್, ಉಹುದ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಿಜರಿ 32ರಲ್ಲಿ ನಿಧನ ಹೊಂದಿದರು.

ನಾನು ಪ್ರಸ್ತಾಪಿಸುವ ಎರಡನೆಯ ಸಹಾಬಿ ಹಝ್ರತ್ ಸಫ್‌ವಾನ್(ರ). ಅವರ ಪಿತ ವಹಬ್ ಬಿನ್ ರಬೀಅ. ಅವರು ಬನೂ ಹಾರಿಸ್ ಬಿನ್ ಫಹ್ರ್ ಗೋತ್ರದವರಾಗಿದ್ದರು. ಹಝ್ರತ್ ರಾಫಿಅ್ ಬಿನ್ ಮುಅಲ್ಲಾರೊಂದಿಗೆ ಅವರಿಗೆ ಸಹೋದರ ಸಂಬಂಧ ಸ್ಥಾಪಿಸಲಾಗಿತ್ತು. ಅವರು ಬದರ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ನಿಧನ ಹೊಂದಿದ ವರ್ಷ ಹಿಜರಿ 18 ಎಂದೂ ಹಿಜರಿ 30 ಎಂದೂ ಹಿಜರಿ 38 ಎಂದೂ ವಿವಿಧ ವರದಿಗಳಿವೆ.

ಇನ್ನೊಬ್ಬ ಸಹಾಬಿ ಹಝ್ರತ್ ಮುಬಶ್ಶಿರ್ ಬಿನ್ ಅಬ್ದುಲ್ ಮುಂಝಿರ್(ರ). ಅವರು ಔಸ್ ಗೋತ್ರದ ಬನೂ ಅಮರ್ ಬಿನ್ ಔಫ್‌ಗೆ ಸೇರಿದ್ದರು. ಹಝ್ರತ್ ಆಖಿಲ್ ಬಿನ್ ಅಬೂ ಬಕೀರ್ ಜೊತೆಗೆ ಸಹೋದರ ಸಂಬಂಧವನ್ನು ಅವರಿಗೆ ಸ್ಥಾಪಿಸಲಾಗಿತ್ತು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿ ಅದರಲ್ಲಿಯೇ ಶಹೀದರಾದರು. ಅವರ ಸಹೋದರರಾದ ಹಝ್ರತ್ ಅಬೂ ಲಬಾಬ ಮತ್ತು ಹಝ್ರತ್ ರಿಫಾಅ ಸಹ ಅವರ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಅಮರ್ ಬಿನ್ ಹರಾಮ್ ಹೇಳುತ್ತಾರೆ: ಉಹುದ್ ಯುದ್ಧ ಪ್ರಾರಂಭವಾಗುವ ಮೊದಲು ಸ್ವಪ್ನದಲ್ಲಿ ಹಝ್ರತ್ ಮುಬಶ್ಶಿರ್ ಬಿನ್ ಮುಂಝಿರ್ ನನ್ನೊಂದಿಗೆ ಹೀಗೆ ಹೇಳುವುದಾಗಿ ಕಂಡೆನು: ನೀವು ಸ್ವಲ್ಪ ದಿನಗಳೊಳಗೆ ನಮ್ಮ ಬಳಿಗೆ ಬರುವಿರಿ. ನಾನು ಕೇಳಿದೆ: ನೀವು ಎಲ್ಲಿದ್ದೀರಿ? ಅವರು ಹೇಳಿದರು: ನಾನು ಸ್ವರ್ಗದಲ್ಲಿದ್ದೇನೆ. ಸ್ವರ್ಗದಲ್ಲಿ ನಾವು ನಮಗಿಷ್ಟವಿರುವಲ್ಲಿ ತಿನ್ನುತ್ತೇವೆ, ಕುಡಿಯುತ್ತೇವೆ. ನಾನು ಕೇಳಿದೆ: ತಾವು ಬದರ್ ಯುದ್ಧದಲ್ಲಿ ಶಹೀದರಾಗಿಲ್ಲವೇ? ಅವರು ಹೇಳಿದರು: ಹೌದು ನಾನು ಶಹೀದನಾಗಿದ್ದೇನೆ. ಆದರೆ ನಾನು ಪುನಃ ಜೀವಂತಗೊಳಿಸಲ್ಪಟ್ಟೆನು. ಹಝ್ರತ್ ಅಬ್ದುಲ್ಲಾ ಈ ಸ್ವಪ್ನದ ಬಗ್ಗೆ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದಾಗ ಅವರು ಹೇಳಿದರು: ಓ ಅಬೂ ಜಾಬಿರ್ ಶಹಾದತ್ ಹೀಗೆಯೇ ಆಗಿರುತ್ತದೆ. ಶಹೀದ್ ಅಲ್ಲಾಹನ ಸಮೀಪಕ್ಕೆ ಹೋಗುತ್ತಾರೆ. ಅಲ್ಲಿ ಶಹೀದ್ ಸ್ವತಂತ್ರರಾಗಿ ತಿರುಗಾಡುತ್ತಾರೆ.

ಇನ್ನೊಬ್ಬ ಸಹಾಬಿ ಹಝ್ರತ್ ವರಖ ಬಿನ್ ಅಯಾಸ್(ರ). ಅವರು ಅನ್‌ಸಾರ್ ಗೋತ್ರವಾದ ಖಜ್‌ರಜ್‌ನ ಬನೂ ಲೂಝಾನ್ ಬಿನ್ ಗನಮ್ ಶಾಖೆಗೆ ಸೇರಿದವರಾಗಿದ್ದರು. ಅವರು ತಮ್ಮ ಸಹೋದರರಾದ ಹಝ್ರತ್ ರಬೀಅ್ ಮತ್ತು ಹಝ್ರತ್ ಅಮರ್ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಖಿಲಾಫತ್ ಕಾಲದಲ್ಲಿ ಯಮಾಮ ಯುದ್ಧದಲ್ಲಿ ಹಿಜರಿ ವರ್ಷ 11ರಲ್ಲಿ ಅವರು ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಮುಹ್‌ರಿಝ್ ಬಿನ್ ನಝ್ಲ(ರ). ಹಝ್ರತ್ ಅಮ್ಮಾರ ಬಿನ್ ಹಝ್ಮ್ ಜೊತೆಗೆ ಅವರಿಗೆ ಸಹೋದರ ಸಂಬಂಧ ಸ್ಥಾಪಿಸಲಾಗಿತ್ತು. ಅವರು ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್(ರ) ತನ್ನ ಒಂದು ಸ್ವಪ್ನದ ಪ್ರಕಾರ ಅವರಿಗೆ ಶಹಾದತ್ ದೊರಕುವ ಶುಭವಾರ್ತೆ ನೀಡಿದ್ದರು.

ಹಝ್ರತ್ ಮುಹ್‌ರಿಝ್ ಶಹೀದರಾದ ಘಟನೆ ಹೀಗೆ ವಿವರಿಸಲಾಗಿದೆ: ಹಝ್ರತ್ ಅಯಾಸ್ ಬಿನ್ ಸಲ್‌ಮ ಝೀಖರ್‌ದ್ ಯುದ್ಧದ ಬಗ್ಗೆ ವರದಿ ಮಾಡುತ್ತಾರೆ: ನನ್ನ ಪಿತ ನನ್ನೊಂದಿಗೆ ಹೇಳಿದರು, ಹುದೈಬಿಯಾ ಸಂಧಿಯ ನಂತರ ನಾವು ಮದೀನದ ಕಡೆಗೆ ಮರಳಿ ಹೋಗುವಾಗ ನಾವು ದಾರಿ ಮಧ್ಯೆ ಒಂದು ಸ್ಥಳದಲ್ಲಿ ತಂಗಿದೆವು. ನಮ್ಮ ಮತ್ತು ಬನೂ ಲಹ್‌ಮಾನ್ ಗೋತ್ರದವರ ಮಧ್ಯೆ ಒಂದು ಬೆಟ್ಟವಿತ್ತು. ಆ ಬೆಟ್ಟದ ಮೇಲೇರಿ ರಾತ್ರಿ ಹೊತ್ತು ಸ್ಥಿತಿಗತಿಗಳ ಬಗ್ಗೆ ದೃಷ್ಟಿ ಇರಿಸುವವನ ಪರವಾಗಿ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥಿಸಿದರು. ಹಝ್ರತ್ ಸಲ್‌ಮ ಬಿನ್ ಅಕೂಅ್ ಹೇಳುತ್ತಾರೆ: ನಾನು ರಾತ್ರಿ ಎರಡು ಮೂರು ಸಾರಿ ಬೆಟ್ಟವನ್ನೇರಿ ವೀಕ್ಷಿಸುತ್ತಿದ್ದೆ. ಅನಂತರ ನಾವು ಮದೀನಕ್ಕೆ ತಲಪಿದೆವು. ಹಝ್ರತ್ ಸಲ್‌ಮ ಪುನಃ ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಬಾಹ್ ವಶಕ್ಕೆ ಒಂಟೆಗಳನ್ನೂ ಹಝ್ರತ್ ತಲ್‌ಹ ವಶಕ್ಕೆ ಕುದುರೆಗಳನ್ನೂ ನೀಡಿ ಕಳುಹಿಸಿದರು. ಬೆಳಗ್ಗಿನ ಸಮಯ ಅಬ್ದುರ್ರಹ್ಮಾನ್ ಫಝೂರಿ ಎಂಬವನು ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂಟೆಗಳನ್ನು ಆಕ್ರಮಿಸಿ ಅಟ್ಟಿಕೊಂಡು ಹೋದನು. ಒಂಟೆಗಳನ್ನು ಮೇಯಿಸುವವನನ್ನು ಕೊಂದನು. ಹಝ್ರತ್ ಸಲ್‌ಮ ಬಿನ್ ಅಕೂಅ್ ಹೇಳುತ್ತಾರೆ: ನಾನು ರಬಾಹ್‌ನೊಂದಿಗೆ ಹೇಳಿದೆ: ಈ

ಕುದುರೆಯನ್ನು ತಲ್‌ಹ ಬಿನ್ ಉಬೈದುಲ್ಲಾರಿಗೆ ತಲಪಿಸು ಮತ್ತು ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವರ ಮೃಗಗಳು ಬಹುದೇವಾರಧಕರಿಂದ ಲೂಟಿ ಮಾಡಲ್ಪಟ್ಟ ಬಗ್ಗೆ ತಿಳಿಸು. ಅನಂತರ ನಾನು ಲೂಟಿಗಾರರನ್ನು ಹುಡುಕುತ್ತಾ ಅವರ ಮೇಲೆ ಬಾಣ ಹೂಡುತ್ತಾ ಹಿಂಬಾಲಿಸಿದೆ. ನಾನು ಶೌರ್ಯಗಾನವನ್ನು ಹೀಗೆ ಆಲಾಪಿಸುತ್ತಿದ್ದೆ. **ಅನಬ್ನುಲ್ ಅಕೂಅ್ ವಲ್ ಯೌಮು ಯೌಮುಲ್ ರಝ್‌ಅ್.** ನಾನು ಅಕೂಅ್‌ರ ಪುತ್ರನಾಗಿರುವೆನು. ಈ ದಿನ ನೀಚ ಜನರ ವಿನಾಶದ ದಿನವಾಗಿದೆ. ಅಲ್ಲಾಹನಾಣೆ ನಾನು ಲೂಟಿಗಾರರ ಮೇಲೆ ಬಾಣ ಪ್ರಹಾರ ಮಾಡಿ ಅವರನ್ನು ಗಾಯಗೊಳಿಸುತ್ತಿದ್ದೆ. ಯಾರಾದರೂ ಕುದುರೆ ಸವಾರ ನನ್ನ ಕಡೆಗೆ ಬಂದರೆ ನಾನು ಮರದ ಹಿಂದೆ ಹೋಗಿ ಅಡಗಿಕೊಂಡು ಅಲ್ಲಿಂದ ಬಾಣ ಹೂಡಿ ಗಾಯಗೊಳಿಸುತ್ತಿದ್ದೆ. ಲೂಟಿಗಾರರು ಅಗಲ ಕಿರಿದಾದ ಕಣಿವೆ ಮಾರ್ಗವನ್ನು ಪ್ರವೇಶಿಷಸಿದಾಗ ನಾನು ಬೆಟ್ಟವನ್ನೇರಿ ಅವರ ಮೇಲೆ ಕಲ್ಲೆಸೆಯುತ್ತಿದ್ದೆನು. ನಾನು ಈ ರೀತಿ ಅವರನ್ನು ಬೆನ್ನಟ್ಟುತ್ತಾ ಹೋದಾಗ ಅವರು ಒಂಟೆಗಳನ್ನೆಲ್ಲಾ ಬಿಟ್ಟು ಮುಂದೆ ಹೋದರು. ನಾನು ಬಾಣ ಹೂಡುವುದನ್ನು ಮುಂದುವರಿಸಿದಾಗ ಅವರು ಮೂವತ್ತಕ್ಕಿಂತ ಹೆಚ್ಚು ಚಾದರುಗಳನ್ನು ಮತ್ತು ಮೂವತ್ತು ಈಟಿಗಳನ್ನು ಎಸೆದು ಬಿಟ್ಟು ಓಡಲು ಸುಲಭವಾಗುವಂತೆ ಮಾಡಿದರು. ಅವರು ಎಸೆದು ಹೋದ ವಸ್ತುಗಳ ಮೇಲೆ ನಾನು ಗುರುತಿಗಾಗಿ ಕಲ್ಲು ಇರಿಸುತ್ತಿದ್ದೆ. ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಸಹಾಬರು ಅವುಗಳನ್ನು ಗುರುತಿಸಲಿ ಎಂದು. ಲೂಟಿಗಾರರು ಅಗಲ ಕಿರಿದಾದ ಒಂದು ಕಣಿವೆ ಮಾರ್ಗಕ್ಕೆ ತಲಪಿದಾಗ ಅವರಿಗೆ ಬದರ್ ಫಝಾರಿಯ ಒಬ್ಬ ಪುತ್ರ ಕಾಣಲು ಸಿಕ್ಕಿದನು. ಅವರೆಲ್ಲರೂ ಕುಳಿತು ಊಟ ಮಾಡಲು ತೊಡಗಿದಾಗ ನಾನು ಒಂದು ಬಂಡೆಕಲ್ಲಿನ ಮೇಲೆ ಕುಳಿತಿದ್ದೆ. ಫಝಾರಿ ಹೇಳಿದನು: ನಾನು ನೋಡುತ್ತಿರುವ ಆ ವ್ಯಕ್ತಿ ಯಾರು? ಲೂಟಿಗಾರರು ಹೇಳಿದರು: ಅವನು ನಮ್ಮನ್ನು ಸತಾಯಿಸುತ್ತಿದ್ದಾನೆ. ಅಲ್ಲಾಹನಾಣೆ! ಬೆಳಗ್ಗಿನಿಂದ ಅವನು ನಮ್ಮ ಮೇಲೆ ಬಾಣ ಹೂಡುತ್ತಿದ್ದಾನೆ. ಅವನು ನಮ್ಮಿಂದ ಎಲ್ಲವನ್ನೂ ಕಿತ್ತುಕೊಂಡನು. ಆಗ ಫಝಾರಿ ಹೇಳಿದನು: ನಿಮ್ಮ ಪೈಕಿ ನಾಲ್ವರು ಅವನ ಬಳಿಗೆ ಹೋಗಬೇಕು. ಹಝ್ರತ್ ಸಲ್‌ಮ ಹೇಳುತ್ತಾರೆ: ನಾಲ್ವರು ನನ್ನ ಬಳಿಗೆ ಬಂದರು. ನಾನು ಕೇಳಿದೆ: ನಾನು ಯಾರೆಂದು ನಿಮಗೆ ಗೊತ್ತಿದೆಯೇ? ಅವರು ಹೇಳಿದರು: ನೀವು ಯಾರೆಂದು ನಮಗೆ ಗೊತ್ತಿಲ್ಲ. ನೀವು ಯಾರೆಂದು ಹೇಳಿರಿ. ನಾನು ಹೇಳಿದೆ: ನಾನು ಸಲ್‌ಮ ಬಿನ್ ಅಕೂಅ್. ಹಝ್ರತ್ ಮುಹಮ್ಮದರ ವದನಕ್ಕೆ ಗೌರವ ನೀಡಿದವನ ಆಣೆ ಹಾಕಿ ಹೇಳುತ್ತೇನೆ. ನಿಮ್ಮವರಲ್ಲಿ ನಾನು ಯಾರನ್ನು ಹಿಡಿಯಲು ಬಯಸುತ್ತೇನೋ ಅವನನ್ನು ಹಿಡಿಯಬಲ್ಲೆನು. ಆದರೆ ನಿಮ್ಮಲ್ಲಿ ಯಾರಾದರೂ ನನ್ನನ್ನು ಹಿಡಿಯಲು ಇಚ್ಛಿಸುವುದಾದರೆ ಅವನಿಗೆ ಹಿಡಿಯಲು ಸಾಧ್ಯವಾಗದು. ಆಗ ಅವರು ಅಲ್ಲಿಂದ ಹೊರಟು ಹೋದರು. ನಾನು ಅಲ್ಲಿಯೇ ಕುಳಿತಿದ್ದೆ. ಆಗ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುದುರೆಗಳು ಮರಗಳ ಮಧ್ಯದಲ್ಲಿ ಬರುತ್ತಿರುವುದಾಗಿ ಕಂಡೆನು. ಎಲ್ಲಾ ಕುದುರೆಗಳಿಗಿಂತ ಮುಂದಾಗಿ ಅಕ್‌ರಮ್ ಅಸದಿ ಎಂಬ ಹೆಸರಿನ ಹಝ್ರತ್ ಮುಹರಿಝ್‌ರ ಕುದುರೆ ಇತ್ತು. ನಾನು ಅದರ ಲಗಾಮನ್ನು ಹಿಡಿದು ನಿಲ್ಲಿಸಿದಾಗ ಅಲ್ಲಿ ಊಟ ಮಾಡುತ್ತಾ ಕುಳಿತವರು ಬೆನ್ನು ಹಿಂದಕ್ಕೆ ಸರಿಸಿ ಓಡಿ ಹೋದರು. ನಾನು ಮುಹರಿಝ್‌ರೊಂದಿಗೆ ಹೇಳಿದೆ, ನೀವು ಅವರಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಅವರು ನಿಮ್ಮನ್ನು ಕೊಲ್ಲದಿರಲಿ – ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಸಹಾಬರು ಅಗಮಿಸುವ ತನಕ. ಆಗ ಅವರು ಹೇಳಿದರು: ಓ ಸಲ್‌ಮ ನೀನು ಅಂತಿಮ ವಿಚಾರಣೆಯ ದಿನದ ಬಗ್ಗೆ ನಂಬಿಕೆ ಹೊಂದಿರುವುದಾದರೆ ಸ್ವರ್ಗ ಸತ್ಯವೆಂದು ನೀನು ನಂಬುವುದಾದರೆ, ನರಕ ಸತ್ಯವೆಂದು ನೀನು ನಂಬುವುದಾದರೆ, ನೀನು ಶಹಾದತ್ ಮತ್ತು ನನ್ನ ಮಧ್ಯೆ ತಡೆಯಾಗಬೇಡ. ಆಗ ನಾನು ಅವರ ಕುದುರೆಯನ್ನು ಬಿಟ್ಟೆನು. ಅನಂತರ ಮುಹರಿಝ್ ಮತ್ತು ಅಬ್ದುರ್ರಹ್ಮಾನ್ ಮಧ್ಯೆ ಹೋರಾಟವಾಯಿತು. ಮುಹರಿಝ್ ಅಬ್ದುರ್ರಹ್ಮಾನ್ ಮತ್ತು ಅವನ ಕುದುರೆಯನ್ನು ಗಾಯಗೊಳಿಸಿದರು. ಆಗ ಅಬ್ದುರ್ರಹ್ಮಾನ್ ಹಝ್ರತ್ ಮುಹರಿಝ್‌ರನ್ನು ಈಟಿಯಿಂದ ತಿವಿದು ಸಹೀದರನ್ನಾಗಿ ಮಾಡಿದನು. ಹಝ್ರತ್ ಅಬೂ ಖತಾದರವರು ಅಬ್ದುರ್ರಹ್ಮಾನ್‌ನ ಹಿಂದೆ ಹೋಗಿ ಅವನನ್ನು ಹಿಡಿದು ಈಟಿಯಿಂದ ತಿವಿದು ಕೊಂದರು.

ಹಝ್ರತ್ ಸಲ್‌ಮ ಹೇಳುತ್ತಾರೆ: ಮುಹಮ್ಮದರ ವದನಕ್ಕೆ ಗೌರವ ದಯಪಾಲಿಸಿದವನ ಆಣೆಹಾಕಿ ಹೇಳುತ್ತೇನೆ: ನಾನು ಲೂಟಿಕೋರರನ್ನು ಬೆನ್ನಟ್ಟಿದೆ. ಸೂರ್ಯಾಸ್ತಮಾನವಾಗುವುದಕ್ಕೆ ಮುಂಚೆ ಅವರು ಒಂದು ಕಣಿವೆ ಪ್ರದೇಶ ತಲಪಿದರು. ಅವರು ಬಾಯಾರಿಕೆಯಿಂದ ಬಳಲಿದ್ದರು. ಅಲ್ಲಿ ನೀರಿತ್ತು. ನನ್ನನ್ನು ನೋಡಿದಾಗ ಅವರು ಓಡಿ ಹೋದರು. ಅವರಿಗೆ ಒಂದು ಹನಿ ನೀರು ಸಹ ಕುಡಿಯಲು ಸಾಧ್ಯವಾಗಲಿಲ್ಲ. ಅವರು ಅಲ್ಲಿಂದ ಓಡಿ ಹೋದರು. ಅವರಲ್ಲಿ ಯಾರಾದರೊಬ್ಬನನ್ನು ಹಿಂದೆ ಇರುವುದಾಗಿ ಕಂಡರೆ ನಾನು ಅವನ ಭುಜದ ಎಲುಬಿಗೆ ಬಾಣದಿಂದ ಹೊಡೆಯುತ್ತಿದ್ದೆ. ನಾನು ಹೇಳುತ್ತಿದ್ದೆ, ನಾನು ಅಕೂಅ್‌ರ ಪುತ್ರನಾಗಿರುವೆನು. ಈ ದಿನ ನೀಚರಿಗೆ ನಾಶದ ದಿನವಾಗಿದೆ. ಆಗ ಅವನು ಹೇಳಿದನು: ಬೆಳಗ್ಗಿನಿಂದ ನಮ್ಮನ್ನು ಬೆನ್ನಟ್ಟುತ್ತಿರುವ ಅದೇ ಅಕೂಅ್ ಪುತ್ರನಲ್ಲವೇ? ನಾನು ಹೇಳಿದೆ: ಹೌದು. ನಾನು ನಿನ್ನ ಜೀವದ ಶತ್ರು ಅಕೂಅ್ ಪುತ್ರನು. ಅವನು ಎರಡು ಕುದುರೆಗಳನ್ನು ಬಿಟ್ಟೋಡಿದನು. ನಾನು ಆ ಎರಡು ಕುದುರೆಗಳನ್ನು ಅಟ್ಟಿಕೊಂಡು ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಹೋದೆನು. ಲೂಟಿಗಾರರನ್ನು ನಾನು ಓಡಿಸಿದ ನೀರಿನ ಸ್ಥಳದಲ್ಲಿ ನಾನು ಅವರನ್ನು ಕಂಡೆನು. ನಾನು ಬಹುದೇವಾರಾಧಕರಿಂದ ಬಿಡಿಸಿಕೊಂಡ ಒಂಟೆಗಳನ್ನೂ ತೆಗೆದುಕೊಂಡ ಇತರ ವಸ್ತುಗಳನ್ನೂ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ನಾನು ಲೂಟಿಗಾರರಿಂದ ಕಿತ್ತುಕೊಂಡ ಒಂಟೆಗಳಲ್ಲಿ ಒಂದನ್ನು ಹಝ್ರತ್ ಬಿಲಾಲ್ ವಧಿಸಿ ಅದರ ಲಿವರ್ ಮತ್ತು ಡುಬ್ಬದ ಮಾಂಸವನ್ನು ಸುಟ್ಟು ಬೇಯಿಸುತ್ತಿದ್ದರು. ನಾನು ಹೇಳಿದೆ: ಅಲ್ಲಾಹನ ಸಂದೇಶವಾಹಕರೇ, ನನಗೆ ಸೈನಿಕರಲ್ಲಿ ನೂರು ಜನರನ್ನು ಆಯ್ಕೆ ಮಾಡಲು ಅನುಮತಿಸಿರಿ. ನಾನು ಆ ಲೂಟಿಗಾರರನ್ನು ಬೆನ್ನಟ್ಟಿ ಅವರನ್ನೆಲ್ಲಾ ಕೊಲ್ಲುವೆನು. ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಹಳ

ನಕ್ಕರು. ಆಗ ಬೆಂಕಿಯ ಬೆಳಕಿನಲ್ಲಿ ಅವರ ಹಲ್ಲುಗಳು ಕಾಣಿಸಿದುವು. ಅವರು ಹೇಳಿದರು: ಹೀಗೆ ಮಾಡಲು ನಿನಗೆ ಸಾಧ್ಯವಿದೆ ಎಂದು ನೀನು ತಿಳಿದುಕೊಂಡಿರುವಿಯೋ? ನಾನು ಹೇಳಿದೆ: ನಿಮಗೆ ಗೌರವ ನೀಡಿದವನ ಹೆಸರಿನಲ್ಲಿ ಆಣೆಹಾಕಿ ಹೇಳುತ್ತೇನೆ, ನಾನು ಮಾಡಬಲ್ಲೆನು. ಆಗ ಅವರು ಹೇಳಿದರು: ಓ ಅಕೂಅ್ ಪುತ್ರ ನೀನು ಜಯಗಳಿಸಿರುವಾಗ ಅವರನ್ನು ಬಿಟ್ಟುಬಿಡು. ನೀನು ಕ್ಷಮಿಸು. ಈಗ ಅವರನ್ನು ಹಿಂಬಾಲಿಸಿ ಕೊಲ್ಲುವುದರಿಂದ ಏನು ಪ್ರಯೋಜನ? ಇದು ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಯಾಗಿದೆ. ಅವರಿಗೆ ಹತ್ಯೆ ಮಾಡುವ ಬಗ್ಗೆ ಸುಟ್ಟು ಹಾಕುವ ಬಗ್ಗೆ ಆಸಕ್ತಿ ಇರಲಿಲ್ಲ.

ಇನ್ನೊಬ್ಬ ಸಹಾಬಿ ಹಝ್ರತ್ ಸೂಯಬ್ತ್ ಬಿನ್ ಸಅದ್(ರ). ಅವರು ಬನೂ ಅಬ್ದುದಾರ್ ಗೋತ್ರದವರಾಗಿದ್ದರು. ಆರಂಭದಲ್ಲಿಯೇ ಮುಸ್ಲಿಮರಾದವರಲ್ಲಿ ಅವರು ಸೇರಿದ್ದರು. ಅನೇಕ ಚರಿತ್ರೆಗಾರರು ಅವರನ್ನು ಅಬಿಸೀನಿಯಾ ದೇಶಕ್ಕೆ ವಲಸೆ ಹೋದವರಲ್ಲಿ ಒಬ್ಬರೆಂದು ಹೇಳಿದ್ದಾರೆ. ಅವರು ಮದೀನಕ್ಕೆ ವಲಸೆ ಹೋಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು.

ಹಝ್ರತ್ ಉಮ್ಮು ಸಲ್ಮಾ ಹೇಳುತ್ತಾರೆ: ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದುವುದಕ್ಕೆ ಒಂದು ವರ್ಷ ಮೊದಲು ಶಾಮ್ ದೇಶದ ಒಂದು ಪ್ರದೇಶವಾದ ಬಸ್ರಕ್ಕೆ ವ್ಯಾಪಾರಕ್ಕೋಸ್ಕರ ಹೋಗಿದ್ದರು. ಅವರ ಜೊತೆಗೆ ನಈಮಾನ್ ಮತ್ತು ಸೂಯಬ್ತ್ ಬಿನ್ ಹರ್‌ಮಲ ಸಹ ಪ್ರಯಾಣಿಸಿದ್ದರು. ಈ ಇಬ್ಬರು ಬದರ್ ಯುದ್ಧದಲ್ಲಿ ಸಹ ಭಾಗವಹಿಸಿದ್ದರು. ನಈಮಾನ್ ಪ್ರಯಾಣದ ಖರ್ಚು ವೆಚ್ಚಗಳ ಮೇಲ್ವಿಚಾರಕರಾಗಿದ್ದರು. ಸೂಯಬ್ತ್‌ರಲ್ಲಿ ರಸಿಕತನದ ಸ್ವಭಾವವಿತ್ತು. ಅವರು ನಈಮಾನ್‌ರೊಂದಿಗೆ ನನಗೆ ಆಹಾರ ನೀಡು ಎಂದು ಹೇಳಿದರು. ಏಕೆಂದರೆ ಊಟ ಮತ್ತು ಪಾನೀಯದ ವ್ಯವಸ್ಥೆ ಮಾಡುವ ಹೊಣೆಗಾರಿಕೆ ನಈಮಾನರಿಗಿತ್ತು. ನಈಮಾನ್ ಹೇಳಿದರು ಹಝ್ರತ್ ಅಬೂಬಕರ್(ರ) ಮರಳಿ ಬಂದ ನಂತರ ಆಹಾರ ನೀಡುವೆನು. ಆಗ ಅವರು ಹೇಳಿದರು: ನೀನು ನನಗೆ ಆಹಾರ ಕೊಡದಿದ್ದರೆ ನೀನು ಸಿಟ್ಟಾಗುವಂತೆ ಮಾಡುವೆನು. ಅವರು ಪ್ರಯಾಣಿಸುತ್ತಿದ್ದಾಗ ಅವರು ಒಂದು ಕೋಮಿನ ಜನರ ಮಧ್ಯದಲ್ಲಿ ದಾಟಿ ಹೋಗುವಾಗ ಸೂಯಬ್ತ್ ಅವರೊಂದಿಗೆ ಹೇಳಿದರು: ನೀವು ನನ್ನಿಂದ ಒಬ್ಬ ಗುಲಾಮನನ್ನು ಖರೀದಿಸುವಿರೋ? ಆ ಕೋಮಿನ ಜನರು ಖರೀದಿಸುವೆವು ಎಂದು ಹೇಳಿದರು. ಸೂಯಬ್ತ್ ಹೇಳಿದರು: ನನ್ನ ಗುಲಾಮ ವಾಚಾಳಿಯಾಗಿದ್ದಾನೆ. ಅವನು ಹೇಳುವನು: ನಾನು ಸ್ವತಂತ್ರ ವ್ಯಕ್ತಿ ಎಂದು. ಅವನು ಆ ರೀತಿ ಹೇಳಿದರೆ ನೀವು ಅವನನ್ನು ಬಿಟ್ಟುಬಿಡಬೇಡಿರಿ. ಆ ಜನರು ಹೇಳಿದರು: ಆಗಲಿ ನಾವು ಅವನನ್ನು ಖರೀದಿಸುವೆವು. ಅವರು ಹತ್ತು ಒಂಟೆಗಳಿಗೆ ಬದಲಾಗಿ ಆ ಗುಲಾಮನನ್ನು ಖರೀದಿಸಿದರು. ಆ ಜನರು ಹಝ್ರತ್ ನಈಮಾನರ ಬಳಿಗೆ ಬಂದು ಅವರ ಕೊರಳಿಗೆ ಹಗ್ಗ ಹಾಕಿದರು. ನಈಮಾನ್ ಹೇಳಿದರು: ಆ ವ್ಯಕ್ತಿ ತಮಾಷೆ ಮಾಡುತ್ತಿದ್ದಾನೆ. ನಾನು ಸ್ವತಂತ್ರನು. ನಾನು ಗುಲಾಮನಲ್ಲ. ಆಗ ಆ ಜನರು ಹೇಳಿದರು: ನಮಗೆ ನಿನ್ನನ್ನು ಮಾರಾಟ ಮಾಡಿದವನು ಮೊದಲೇ ನಮ್ಮೊಂದಿಗೆ ಹೇಳಿದ್ದಾನೆ ನೀನು ಹೀಗೆಯೇ ಹೇಳುವೆ ಎಂದು. ಅನಂತರ ಆ ಜನರು ಅವರನ್ನು ಹಿಡಿಗೂಡಿ ತೆಗೆದುಕೊಂಡು ಹೋದರು. ಹಝ್ರತ್ ಅಬೂಬಕರ್(ರ) ಮರಳಿ ಬಂದಾಗ ಈ ವಿಷಯ ತಿಳಿದು ಆ ಕೋಮಿನ ಜನರನ್ನು ಹಿಂಬಾಲಿಸಿ ಹೋಗಿ ಅವರಿಗೆ ಒಂಟೆಗಳನ್ನು ಮರಳಿಸಿ ಹಝ್ರತ್ ನಈಮಾನ್‌ರನ್ನು ಮರಳಿ ಕರೆದುಕೊಂಡು ಬಂದರು.

ಸಹಾಬರಲ್ಲಿ ಇಂತಹ ನಕ್ಕು ನಗಿಸುವ ಘಟನೆಗಳು ಸಹ ನಡೆಯುತ್ತಿದ್ದುವು. ನಂತರ ಅವರೆಲ್ಲರೂ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ನಡೆದ ಘಟನೆಯನ್ನು ವಿವರಿಸಿದರು. ವರದಿಗಾರ ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಸಹಾಬರು ಒಂದು ವರ್ಷ ತನಕ ಈ ಸಂಭವದ ಬಗ್ಗೆ ಸ್ಮರಿಸಿ ರಸಾನುಭೂತಿ ಹೊಂದುತ್ತಿದ್ದರು.

ಸಹಾಬರ ಬಗ್ಗೆ ಈ ವಿವರಣೆ ನೀಡಿದ ನಂತರ ನಾನು ಒಂದು ವಿಷಯ ಸಂಕ್ಷಿಪ್ತವಾಗಿ ಹೇಳಲು ಬಯಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣಗೊಂಡ ಒಂದು ಇಲ್‌ಹಾಮ್ **ವಸ್ಸಿಅ್ ಮಕಾನಕ** ನಿನ್ನ ಭವನವನ್ನು ವಿಸ್ತಾರಗೊಳಿಸು ಎಂದಾಗಿತ್ತು. ಅವರಿಗೆ ಈ ಇಲ್‌ಹಾಮ್ ವಿವಿಧ ಸಮಯಗಳಲ್ಲಿ ಲಭಿಸಿತ್ತು. ಅಲ್ಲಾಹನು ತನ್ನ ಪ್ರವಾದಿಗಳಿಗೆ ಇಲ್‌ಹಾಮ್ ಮೂಲಕ ಏನಾದರೂ ಆಜ್ಞೆ ನೀಡುವಾಗ, ಹೀಗೆ ಮಾಡು ಎಂದು ಹೇಳುವಾಗ, ಅಲ್ಲಾಹನು ಅದಕ್ಕೋಸ್ಕರ ತನ್ನ ಸಹಾಯ ನೀಡುತ್ತಾನೆ. ಅದಕ್ಕೋಸ್ಕರ ಆವಶ್ಯಕವಾದ ಮಾರ್ಗಗಳನ್ನೂ ಒದಗಿಸುತ್ತಾನೆ. ಆ ರೀತಿ ಆ ಆಜ್ಞೆ ಈಡೇರಿಸಲ್ಪಡುತ್ತದೆ. ಇದು ನಮ್ಮ ಅನುಭವವೂ ಆಗಿದೆ.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹುತಆಲ ಇಲ್ಲಿಗೆ ಹಿಜ್‌ರತ್ ಮಾಡಿ ಆಗಮಿಸಿದಾಗ ಅಲ್ಲಾಹನು ಅಸಾಧಾರಣವಾದ ರೀತಿಯಲ್ಲಿ ತಾನು ವಿಸ್ತಾರ ನೀಡುವ ದೃಶ್ಯ ತೋರಿಸಿದನು. ಇಸ್ಲಾಮಾಬಾದ್‌ನಲ್ಲಿ 25 ಏಕರೆ ಜಮೀನು ಖರೀದಿಸುವ ಭಾಗ್ಯ ಜಮಾಅತಿಗೆ ಲಭಿಸಿತು. ಅನಂತರ ಆರು ಏಕರೆ ಜಮೀನು ಅದರೊಂದಿಗೆ ಸೇರಿಸಲಾಯಿತು. ಅಲ್ಲಿ ಜಲ್ಸ ಸಾಲಾನ ಜರಗುತ್ತಿತ್ತು. ಅಲ್ಲಿ ಜಮಾಅತಿನ ಅಧಿಕೃತ ಕೇಂದ್ರ ನಿರ್ಮಿಸುವ ಇರಾದೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರಿಗೆ ಇತ್ತು. ಆದರೆ ಪ್ರತಿಯೊಂದು ಕೆಲಸಕ್ಕೆ ಒಂದು ನಿಗದಿತ ಸಮಯ ವಿಧಿಸಲ್ಪಟ್ಟಿರುತ್ತವೆ. ಈಗ ಇಸ್ಲಾಮಾಬಾದ್‌ನಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸುವ ಭಾಗ್ಯ ದೊರೆತಿದೆ. ಕೆಲವು ಕಚೇರಿಗಳನ್ನು ಸಹ ಹೊಸ ಸೌಲಭ್ಯಗಳೊಂದಿಗೆ ನಿರ್ಮಿಸಲಾಗಿದೆ. ಮಸ್‌ಜಿದ್ ಸಹ ನಿರ್ಮಿಸಲಾಗಿದೆ. ಖಲೀಫರ ನಿವಾಸ ಸಹ ನಿರ್ಮಿಸಲಾಗಿದೆ. ವಾಕಿಫೀನೆ ಝಿಂದಗಿಗಳಿಗೆ ಮತ್ತು ಕಚೇರಿಗಳ ಕಾರ್ಯನಿರ್ವಾಹಕರಿಗೆ ಮನೆಗಳನ್ನು ನಿರ್ಮಿಸಲಾಗಿದೆ. ಇದರೊಂದಿಗೆ ಫಾರ್ನ್‌ಹಮ್‌ನಲ್ಲಿ ಒಂದು ದೊಡ್ಡ ಎರಡು ಮಾಳಿಗೆಯ ಕಟ್ಟಡ ಸಹ ಜಮಾಅತಿಗೆ ಲಭಿಸಿದೆ. ಅದರಲ್ಲಿ ಮುದ್ರಣಾಲಯ ಸ್ಥಾಪಿತವಾಗಿದೆ. ಈ ಕಟ್ಟಡ ಕೇವಲ 2–3 ಮೈಲು ದೂರದಲ್ಲಿದೆ. ಅಲ್ಲಿ ಕೆಲವು ಕಚೇರಿಗಳೂ ಇವೆ. ಅಲ್ಲಿ ಖುದ್ದಾಮುಲ್ ಅಹ್ಮದಿಯಾ ಸಹ ಒಂದು ದೊಡ್ಡ ಕಟ್ಟಡ ಖರೀದಿಸಿದೆ. ಅದಕ್ಕೂ ಮೊದಲು ಜಲ್ಸಗಾಹ್‌ಗಾಗಿ ಹದೀಖತುಲ್ ಮಹ್‌ದಿ ಖರೀದಿಸುವ ಭಾಗ್ಯ ಲಭಿಸಿದೆ. ಅದು

ಸಹ ಸಮೀಪವಿದೆ. ಲಂಡನ್ ನಗರದಲ್ಲಿದ್ದ ಜಾಮಿಅ ಅಹ್ಮದಿಯಾವನ್ನು ಇಲ್ಲಿಗೆ ವರ್ಗಾಯಿಸಲಾಗಿದೆ. ಅಸಾಧಾರಣವಾದ ಕಡಿಮೆ ಬೆಲೆಯಲ್ಲಿ ಜಮೀನು ಖರೀದಿಸಲಾಗಿದೆ. ಅಂದಾಜು ಮೂವತ್ತು ಏಕರೆ ವಿಸ್ತೀರ್ಣವಿರುವ ಸ್ಥಳದಲ್ಲಿ ಉತ್ತಮ ಸೌಕರ್ಯಗಳಿವೆ. ಈ ಸ್ಥಳಗಳೆಲ್ಲವೂ ಇಸ್ಲಾಮಾಬಾದ್‌ನಿಂದ 10ರಿಂದ ಇಪ್ಪತ್ತು ಮಿನಿಟುಗಳಷ್ಟು ಪ್ರಯಾಣಿಸುವ ದೂರದಲ್ಲಿವೆ. ಇಸ್ಲಾಮಾಬಾದ್‌ನಲ್ಲಿ ರೂಪಿಸಲಾದ ಯೋಜನೆ ಪ್ರಕಾರ ಈ ಎಲ್ಲಾ ಸ್ಥಳಗಳನ್ನು ಖರೀದಿಸುವ ಯೋಜನೆ ಮೊದಲೇ ರೂಪಿಸಿರಲಿಲ್ಲ. ಇವೆಲ್ಲಾ ಅಲ್ಲಾಹನ ಯೋಜನೆಗಳ ಪ್ರಕಾರ ಜಾರಿಗೊಂಡವು. ಇವೆಲ್ಲಾ ಒಂದೇ ಪ್ರದೇಶದಲ್ಲಿ ಹತ್ತಿರ ಹತ್ತಿರವಾಗಿ ದೊರೆತವು. ಅಲ್ಲಾಹನು ಕೇಂದ್ರದ ಜೊತೆಗೆ ಬೇರೆ ವಸ್ತುಗಳನ್ನೂ ಒದಗಿಸಿದನು. ಜಾಮಿಅ ಸಮೀಪದಲ್ಲಿರುವುದು ಆವಶ್ಯಕವಾಗಿದೆ. ಈ ಎಲ್ಲಾ ಸ್ಥಳಗಳು ಒಂದೇ ಪ್ರದೇಶದಲ್ಲಿ ಒಟ್ಟಿಗೆ ಇರುವುದು ಪ್ರತಿಯೊಂದು ರೀತಿಯಲ್ಲಿಯೂ ಅನುಗ್ರಹಭರಿತವಾಗಿರಲಿ ಎಂದು ಪ್ರಾರ್ಥಿಸಿರಿ. ಕಾಲದ ಖಲೀಫರಿಗೋಸ್ಕರ ನಿವಾಸ ಮತ್ತು ಕಚೇರಿಗಳು ಅಲ್ಲಿ ನಿರ್ಮಿಸಲ್ಪಟ್ಟಿವೆ ಎಂದು ನಾನು ಮೊದಲು ಪ್ರಸ್ತಾಪಿಸಿದ್ದೇನೆ. ದೊಡ್ಡ ಮಸ್‌ಜಿದ್ ಸಹ ನಿರ್ಮಾಣವಾಗಿದೆ. ಆದುದರಿಂದ ಇನ್‌ಶಾಅಲ್ಲಾಹ್ ಕೆಲವು ದಿನಗಳೊಳಗೆ ನಾನು ಲಂಡನ್‌ನಿಂದ ಇಸ್ಲಾಮಾಬಾದ್‌ಗೆ ನನ್ನ ವಾಸ ಸ್ಥಳವನ್ನು ಬದಲಾಯಿಸುವೆನು. ಅಲ್ಲಾಹನು ಇಸ್ಲಾಮಾಬಾದ್‌ನಲ್ಲಿ ತಬ್ಲೀಗ್ ಕೆಲಸವನ್ನು ಹಿಂದಿಗಿಂತಲೂ ಹೆಚ್ಚು ವಿಸ್ತಾರಗೊಳಿಸುವವನಾಗಲಿ. ಪ್ರಾರ್ಥಿಸಿರಿ, ಈ ಯೋಜನೆಯನ್ನು ಮತ್ತು ಅಲ್ಲಿಗೆ ವರ್ಗಾವಣೆ ಹೊಂದುವುದನ್ನು ಅಲ್ಲಾಹನು ಎಲ್ಲಾ ರೀತಿಗಳಲ್ಲೂ ಶುಭದಾಯಕವನ್ನಾಗಿ ಮಾಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 12-04-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon